# ನಗರಸಭಾ ಕಾರ್ಯಾಲಯ, ಮಂಡ್ಯ

## ನಾಗರೀಕರ ಗಮನಕ್ಕೆ
## 'ಚಿಕನ್ ಗುನ್ಯಾ' ರೋಗದ ಬಗ್ಗೆ ಎಚ್ಚರಿಕೆ

1. ಚಿಕನ್ ಗುನ್ಯಾ ರೋಗವು 'ಏಡಸ್ ಈಜಿಪ್ಟಿ' ಜಾತಿಯ ಸೊಳ್ಳೆಗಳು ಹರಡುವ ಒಂದು ರೀತಿಯ ವೈರಸ್‌ನಿಂದುಂಟಾಗುವ ರೋಗವಾಗಿದೆ. 'ಹಕ್ಕಿ – ಜ್ವರ' ಚಿಕನ್ ಗುನ್ಯಾ ಕ್ಕೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ನೆಗಡಿ, ತಲೆನೋವು, ಸಂಧಿನೋವು ಹಾಗೂ ಕಣ್ಣುನೋವು ಈ ರೋಗದ ಸಾಮಾನ್ಯ ಲಕ್ಷಣಗಳಾಗಿದ್ದು, ಈ ರೋಗದ ಮೂಲಕ ಮನುಷ್ಯರ ಸಾಮಾನ್ಯ ಚಟುವಟಿಕೆಗಳು ಭಾದಿಸಲ್ಪಡುವುದಾದರೂ, ಮಾರಣಾಂತಿಕವಲ್ಲ ಹಾಗೂ ತನ್ನಷ್ಟಕ್ಕೆ ತಾನೇ ಗುಣಮುಖವಾಗುವಂತಹುದು.

2. ಹಗಲಿನಲ್ಲಿ ಮಾತ್ರವೇ ಕಚ್ಚುವ ಈ ಸೊಳ್ಳೆಗಳು ತೆರೆದ ಶುದ್ಧ ನೀರಿನಲ್ಲಿ ಮಾತ್ರ ಮೊಟ್ಟೆಯಿಟ್ಟು ಸಂತಾನಾಭಿವೃದ್ಧಿ ಮಾಡುತ್ತವೆ. ಈ ಸೊಳ್ಳೆಗಳು ತನ್ನ ಮೇಲಿನ ಕಪ್ಪು ಮತ್ತು ಬಿಳಿ ಬಣ್ಣಗಳ ಪಟ್ಟಿಗಳ ಕಾರಣ 'ಟೈಗರ್' ಎಂದೂ ಕರೆಯಲ್ಪಡುತ್ತವೆ. ಇವು ಕೊಳಚೆ ನೀರು–ಚರಂಡಿಗಳಲ್ಲಿ ಸಂತಾನಾಭಿವೃದ್ಧಿ ಮಾಡುವುದಿಲ್ಲ.

3. ಈ ಸೊಳ್ಳೆಗಳು, ನೀರು ತುಂಬಿದ ಕಪ್‌ಗಳಲ್ಲಿ ಟಯರ್‌ಗಳಲ್ಲಿ, ಹೂ ಕುಂಡಗಳಲ್ಲಿ, ಜಾನುವಾರುಗಳಿಗೆ ಕುಡಿಯಲು ತುಂಬಿಟ್ಟ ನೀರಿನಲ್ಲಿ ಶೇಖರಿಸಿದ ಮಳೆ ನೀರಿನಲ್ಲಿ ಹಾಗೂ ಮನೆಯ ಒಳಗೂ–ಹೊರಗೂ ಟ್ಯಾಂಕ್‌ಗಳಲ್ಲಿ ತೆರೆದಿಟ್ಟ ನೀರಿನಲ್ಲಿ ಸಂತಾನಾಭಿವೃದ್ಧಿ ಮಾಡುತ್ತವೆ. ಕಾರಣ, ನಾಗರೀಕರು ತಮ್ಮ ಮನೆಗಳಲ್ಲಿ ನೀರನ್ನು ಶೇಖರಿಸಿಡುವ ಸಂದರ್ಭದಲ್ಲಿ ವಿಶೇಷ ಕಾಳಜಿ ವಹಿಸಲು ತಿಳಿಸಲಾಗಿದೆ.

4. ನೀರನ್ನು ಶೇಖರಿಸಿಡುವುದು ಅನಿವಾರ್ಯವಾದಲ್ಲಿ, ಮೂರು ದಿನಗಳಿಗೊಮ್ಮೆ ಖಡ್ಡಾಯವಾಗಿ ಹಳೆ ನೀರನ್ನು ಸಂಪೂರ್ಣವಾಗಿ ಹೊರ ಚೆಲ್ಲಿ ಶುದ್ಧ ನೀರನನು ತುಂಬಿಡಬೇಕು. 3 ದಿನಗಳಿಗಿಂತ ಅಧಿಕ ಸಮಯದವರೆಗೆ ಖಂಡಿತವಾಗಿಯೂ ನೀರನ್ನು ಸಂಗ್ರಹಿಸಬಾರದು.

5. ಮೇಲೆ ತಿಳಿಸಿರುವ, ಚಿಕನ್ ಗುನ್ಯಾ ರೋಗದ ಯಾವುದೇ ಲಕ್ಷಣಗಳು ಬಂದಲ್ಲಿ ಹತ್ತಿರದ ಆಸ್ಪತ್ರೆಯನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದುಕೊಳ್ಳುವುದು.

6. ಈ ರೋಗದ ಕುರಿತು ಭಯ ಹುಟ್ಟಿಸುವ ಯಾವುದೇ ಕಾರಣಗಳಿಲ್ಲ. ಮೇಲೆ ತಿಳಿಸಿರುವ ಮುಂಜಾಗ್ರತಾ ಕ್ರಮಗಳ ಮೂಲಕ ಜನರು ಇದನ್ನು ಸುಲಭವಾಗಿ ತಡೆಗಟ್ಟಬಹುದು.

| | | | |
|---|---|---|---|
| ಸಹಿ/– | ಸಹಿ/– | ಸಹಿ/– | ಸಹಿ/– |
| ಸ್ಥಾಯಿ ಸಮಿತಿ ಅಧ್ಯಕ್ಷರು, | ಉಪಾಧ್ಯಕ್ಷರು, | ಪೌರಾಯುಕ್ತರು, | ಅಧ್ಯಕ್ಷರು, |
| ನಗರಸಭೆ, ಮಂಡ್ಯ | ನಗರಸಭೆ, ಮಂಡ್ಯ | ನಗರಸಭೆ, ಮಂಡ್ಯ | ನಗರಸಭೆ, ಮಂಡ್ಯ |